





ಡಾಕ್ಟರ್: ನೀವು ಆಪರೇಷನ್ ನಂತರ ನಾಳೆ ನಿಮ್ಮ ಬಂಧುಗಳನ್ನು ಭೇಟಿಯಾಗಬಹುದು.
ರೋಗಿ: ಡಾಕ್ಟ್ರೆ ನಾನಿರುವುದು ಒಬ್ಬನೇ. ನಮ್ಮವರೆಲ್ಲಾ ತೀರಿಹೋಗಿದ್ದಾರೆ.
ಡಾಕ್ಟರ್: ನನಗೆ ಗೊತ್ತು.

ಹುಡುಗ: ಮದುವೆಯಾಗುವುದಕ್ಕಿಂತ ಮುಂಚೆ ನಿಮ್ಮನ್ನು ಅರ್ಥ ಮಾಡಿಕೊಳ್ಳಬೇಕು. ಸೋ... ನಿಮ್ಮ ಬಗ್ಗೆ ತಿಳಿಸಿ.
ಹುಡುಗಿ: ಮದುವೆಯ ನಂತರವೂ ನಾನು ಕೆಲಸಕ್ಕೆ ಹೋಗಬೇಕು ಎಂಬುದು ನನ್ನ ಆಸೆ.
ಹುಡುಗ: ಸರಿ.
ಹುಡುಗಿ: ನನ್ನ ಸಂಬಳ ನಿಮಗೆ ಕೊಡೋದಿಲ್ಲ.
ಹುಡುಗ: ಸರಿ.
ಹುಡುಗಿ: ಮದುವೆಯ ನಂತರ ಮನೆಯಲ್ಲಿ ನಾವಿಬ್ಬರೇ ಇರಬೇಕು.
ಹುಡುಗ: ಸರಿ.
ಹುಡುಗಿ: ಪ್ರತಿವರ್ಷವೂ ಫಾರಿನ್ ಪ್ರವಾಸಕ್ಕೆ ಕರೆದುಕೊಂಡು ಹೋಗಬೇಕು. ವರ್ಷಕ್ಕೊಂದು ಜ್ಯುವೆಲ್ಲರಿ ಕೊಡಿಸಬೇಕು.
ಹುಡುಗ: ಹಾಗಾದ್ರೆ ನಾವಿಬ್ಬರು ಒಂದು ಕೆಲಸ ಮಾಡೋಣ. ಮದುವೆ ಬದಲು ಲಿವಿಂಗ್ ಟುಗೆದರ್‌ನಲ್ಲಿ ಇರೋಣ.

ಪ್ರಿಯತಮೆ: ನಿಮ್ಮ ಅಮ್ಮ ಇದಾರಾ?
ಪ್ರಿಯಕರ: ಯೋಚಿಸಬೇಡ, ನಮ್ಮಮ್ಮ ತೀರಿಕೊಂಡಿದ್ದಾರೆ. ಅತ್ತೆ ಕಾಟವಿಲ್ಲ.
ಪ್ರಿಯತಮೆ: ಹಾಗಾದರೆ ಗೃಹಲಕ್ಷ್ಮಿ ಗ್ಯಾರಂಟಿಯ 2000 ರೂಪಾಯಿಯೂ ನನಗೇ ಸಿಗುತ್ತೆ ತಾನೇ?

ಕಳ್ಳ: ಒಳ್ಳೆಯ ನಾಯಿ ಬಿಸ್ಕತ್ತು ಕೊಡಿ.
ಅಂಗಡಿ ಮಾಲೀಕ: ಸ್ಟಾಕ್ ಇಲ್ಲ, ನಾಳೆ ತರಿಸಿಕೊಡಲೆ?
ಕಳ್ಳ: ಇಂದೇ ಬೇಕಿತ್ತು, ಇವತ್ತು ನೈಟ್ ಡ್ಯೂಟಿ ಇದೆ.

ಹುಡುಗ: ನಿಮ್ಮ ಅಪ್ಪ ಇದಾರಾ?
ಹುಡುಗಿ: ಇಲ್ಲ.
ಹುಡುಗ: ಅಣ್ಣ, ತಮ್ಮ?
ಹುಡುಗಿ: ಇಲ್ಲ.
ಹುಡುಗ: ಹಾಗಾದರೆ ಭಯವೇನಿಲ್ಲ ಬಿಡು. ನಾನು ನಿನ್ನ ಪ್ರೀತಿಸುತ್ತೇನೆ.

ಡಾಕ್ಟರ್: ನಿಮ್ಮ ಲಿವರ್ ದೊಡ್ಡದಾಗಿದೆ.
ರೋಗಿ: ಇನ್ನೂ ಜಾಸ್ತಿ ವಿಸ್ಕಿ ಹಿಡಿಸುತ್ತಾ?

ಗ್ರಾಹಕ: ಎಣ್ಣೆ ಬೇಕಾಗಿತ್ತು, ಯಾವ ಬ್ರ್ಯಾಂಡ್ ಇದೆ ನಿಮ್ಮಲ್ಲಿ?
ಸಿಬ್ಬಂದಿ: ಸಾರ್ ಇಲ್ಲಿ ನೀವ್ ಕೇಳುತ್ತಿರುವ ಬ್ರ್ಯಾಂಡ್ ಯಾವುದೂ ಸಿಗಲ್ಲ. ಇದು ಬಾರ್ ಅಲ್ಲ, ಪ್ರಾವಿಜನ್ ಸ್ಟೋರ್!
ಗ್ರಾಹಕ: ರೀ... ಎಣ್ಣೆ ನನಗಲ್ಲ. ಮನೆಯಲ್ಲಿ ಅಡುಗೆ ಮಾಡೋಕೆ ಬೇಕಿತ್ತು.

ಗುಂಡ: ನಾನು ಕೊಟ್ಟ ಚೆಕ್ ಅನ್ನು ಯಾಕೆ ಹಿಂತಿರುಗಿಸಿದ್ದೀರಿ?
ಬ್ಯಾಂಕ್ ಸಿಬ್ಬಂದಿ: ಹಣ ಕಡಿಮೆ ಇದೆ, ಅದಕ್ಕೆ ಹಿಂತಿರುಗಿಸಿದ್ದೇವೆ.
ಗುಂಡ: ನಿಮ್ಮ ಬ್ಯಾಂಕಿನಲ್ಲಿ ಹಣವಿಲ್ಲದಿದ್ದರೆ ಅದು ನನ್ನ ಸಮಸ್ಯೆಯಲ್ಲ, ನನಗೆ ಹಣ ಬೇಕೇಬೇಕು.
ಬ್ಯಾಂಕ್ ಸಿಬ್ಬಂದಿ: ಹಣವಿಲ್ಲದಿರುವುದು ನಮ್ಮ ಬ್ಯಾಂಕಿನಲ್ಲಲ್ಲ, ನಿಮ್ಮ ಖಾತೆಯಲ್ಲಿ.
ಗುಂಡ: ನಮಗೆ ನಾನಾ ರೀತಿಯ ಟ್ಯಾಕ್ಸ್ ಹಾಕಿದಂತೆ ಬ್ಯಾಂಕ್ ಖಾತೆಗೂ ಸ್ವಲ್ಪ ಹಣ ಹಾಕಿದ್ದಿದ್ರೆ ಆಗ್ತಿತ್ತಲ್ವಾ?
ಬ್ಯಾಂಕ್ ಸಿಬ್ಬಂದಿ: ಅದೂ ಹಾಕಿದ್ದೀವಿ, ಹಣವಲ್ಲ, ಪೆನಾಲ್ಟಿ.

ಸಂಗ್ರಹ: ಸದ್ಯೋಜಾತ, ಅಸಗೋಡು